**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ ಸಿದ್ದಿ ಇವರ ನಿಯಮ 330 ರಡಿಯ ಪ್ರಸ್ತಾವನೆಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ:-**

**"ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಮುಂಡಗೋಡು, ಹಳಿಯಾಳ, ಶಿರಸಿ ಹಾಗೂ ಇನ್ನಿತರ ತಾಲ್ಲೂಕುಗಳ ಸುಮಾರು 43 ಅಂಗನವಾಡಿ ಕಟ್ಟಡಗಳು ಹಳೆಯದಾಗಿದ್ದು, ಶಿಥಿಲಾವಸ್ಥೆಗೆ ತಲುಪಿರುವುದರಿಂದ ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿವೆ. ಹೀಗಾಗಿ ಹೊಸ ಅಂಗನವಾಡಿ ಕಟ್ಟಡಗಳ ನಿರ್ಮಾಣದ ಕುರಿತು."**

** ** **

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ, 2ನೇ ಅಕ್ಟೋಬರ್ 1975 ರಂದು ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳೊಂದಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಲಾಗಿದೆ. 6 ವರ್ಷದ ಒಳಗಿನ ಮಕ್ಕಳ, ಗರ್ಭಿಣಿ, ಬಾಣಂತಿ ಮತ್ತು ಕಿಶೋರಿಯರ ಸರ್ವೋತೋಮುಖ ಅಭಿವೃದ್ಧಿಯು ಈ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ.

ಪ್ರಸ್ತುತ ರಾಜ್ಯದಲ್ಲಿ 67570 ಮುಖ್ಯ ಅಂಗನವಾಡಿ ಹಾಗೂ 2329 ಮಿನಿ ಅಂಗನವಾಡಿ ಕೇಂದ್ರಗಳನ್ನೊಳಗೊಂಡಂತೆ ಒಟ್ಟು 69899 ಅಂಗನವಾಡಿ ಕೇಂದ್ರಗಳಿವೆ. ಈ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳಗಳ ಮಾಹಿತಿ ಈ ಕೆಳಕಂಡಂತಿದೆ.

| | |
|---|---|
| ಸ್ವಂತ ಕಟ್ಟಡ | 46769 |
| ಪಂಚಾಯತ್ ಕಟ್ಟಡ | 1053 |
| ಸಮುದಾಯ ಭವನ | 2953 |
| ಶಾಲಾ ಆವರಣ | 4966 |
| ಪರ್ಯಾಯ ವ್ಯವಸ್ಥೆ | 1333 |
| ಬಾಡಿಗೆ ಕಟ್ಟಡ | 12720 |
| ಯುವಕ ಮಂಡಳ | 67 |
| ಮಹಿಳಾ ಮಂಡಳ | 38 |
| **ಒಟ್ಟು** | **69899** |

ಉತ್ತರಕನ್ನಡ ಜಿಲ್ಲೆಯಲ್ಲಿ 2782 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಕಾರ್ಯನಿರ್ವಹಿಸುತ್ತಿರುವ ಕಟ್ಟಡಗಳ ಮಾಹಿತಿ ಈ ಕೆಳಕಂಡಂತಿದೆ.

| | |
|---|---|
| ಸ್ವಂತ ಕಟ್ಟಡ | 2103 |
| ಪಂಚಾಯತ್ ಕಟ್ಟಡ | 44 |
| ಸಮುದಾಯ ಭವನ | 123 |
| ಶಾಲಾ ಆವರಣ | 175 |
| ಪರ್ಯಾಯ ವ್ಯವಸ್ಥೆ | 07 |
| ಬಾಡಿಗೆ ಕಟ್ಟಡ | 322 |
| ಯುವಕ ಮಂಡಳ | 07 |
| ಮಹಿಳಾ ಮಂಡಳ | 01 |
| **ಒಟ್ಟು** | **2782** |

ಪ್ರಸ್ತುತ ಉತ್ತರಕನ್ನಡ ಜಿಲ್ಲೆಯಲ್ಲಿ ಶಿಥಿಲಗೊಂಡ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ತಾಲೂಕಿನ ಹೆಸರು | ಪ್ರಸ್ತುತ ಶಿಥಿಲಗೊಂಡ ಅಂ.ಕೇಂದ್ರಗಳ ಸಂಖ್ಯೆ | ವಿವಿಧ ಯೋಜನೆಯಡಿ ನಿರ್ಮಾಣ ಪ್ರಗತಿಯಲ್ಲಿರುವ ಅಂ.ಕಟ್ಟಡಗಳ ಸಂಖ್ಯೆ | ಹೊಸ ಕಟ್ಟಡಕ್ಕೆ ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿ ಪ್ರಾರಂಭಿಸಲು ಬಾಕಿ ಇರುವ ಅಂ.ಕಟ್ಟಡಗಳ ಸಂಖ್ಯೆ | ನಿವೇಶನ ಲಭ್ಯವಿರುವ ಅಂ.ಕೇಂದ್ರಗಳ ಸಂಖ್ಯೆ |
|---|---|---|---|---|---|
| 1 | ಕಾರವಾರ | 7 | 3 | 4 | 0 |
| 2 | ಅಂಕೋಲಾ | 0 | 0 | 0 | 0 |
| 3 | ಕುಮಟಾ | 13 | 4 | 4 | 5 |
| 4 | ಹೊನ್ನಾವರ | 4 | 1 | 1 | 2 |
| 5 | ಭಟ್ಕಳ | 9 | 3 | 3 | 3 |
| 6 | ಶಿರಸಿ | 1 | 0 | 0 | 1 |
| 7 | ಸಿದ್ದಾಪುರ | 9 | 2 | 0 | 7 |
| 8 | ಯಲ್ಲಾಪುರ | 15 | 3 | 7 | 5 |
| 9 | ಮುಂಡಗೋಡ | 3 | 1 | 0 | 2 |
| 10 | ಹಳಿಯಾಳ | 6 | 2 | 3 | 1 |
| 11 | ದಾಂಡೇಲಿ | 3 | 3 | 0 | 0 |
| 12 | ಜೋಯಿಡಾ | 10 | 4 | 6 | 0 |
| | **ಒಟ್ಟು** | **80** | **26** | **28** | **26** |

ಉತ್ತರಕನ್ನಡ ಜಿಲ್ಲೆಯ 12 ತಾಲ್ಲೂಕುಗಳಲ್ಲಿ (ಅಂಕೋಲಾ ಹೊರತುಪಡಿಸಿ) ಒಟ್ಟು 80 ಅಂಗನವಾಡಿ ಕಟ್ಟಡಗಳು ಶಿಥಿಲಗೊಂಡಿದ್ದು, ಅವುಗಳಲ್ಲಿ ಒಟ್ಟು 26 ಅಂಗನವಾಡಿ ಕಟ್ಟಡಗಳು ಮಂಜೂರು / ಪ್ರಗತಿಯಲ್ಲಿವೆ. 28 ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿ ಪ್ರಾರಂಭಿಸಲು ಬಾಕಿ ಇದೆ.

ಜಿಲ್ಲೆಯಲ್ಲಿ ಶಿಥಿಲಗೊಂಡಿರುವ ಉಳಿದ 26 ಅಂಗನವಾಡಿ ಕೇಂದ್ರಗಳಿಗೆ ಹಂತ-ಹಂತವಾಗಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಕಟ್ಟಡಗಳ ಪುನರ್ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದು.

**ಸಂಖ್ಯೆ: ಮಮಇ 256 ಐಸಿಡಿ 2023**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು.